ಈಗ ಆಧುನೀಕರಣಗೊಳಿಸಿದ ಯಂತ್ರಗಳು ಇರುವಾಗಲೂ ಹಳೆಯ ಕಾಲದ್ದನ್ನು ಏತಕ್ಕೆ ಇಟ್ಟುಕೊಂಡಿರ ಬೇಕು ? ಈ ಕಂಪೆನಿಯವರನ್ನು ಉದ್ಧಾರ ಮಾಡುವುದಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಇದರಿಂದ ಇಲಾ ಖೆಗೆ ನಷ್ಟವಾಗುತ್ತಿದೆ. ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ತಮ್ಮ ಕಾಲದಲ್ಲಾದರೂ ದಿಟ ಹೆಜ್ಜೆ ಇಟ್ಟು ಟೆಡ್‌ಫೋರ್ಡ್ ಮತ್ತು ಡಾಡ್ಜ್ ಕಂಪೆನಿಯ ಮೆಷಿನರಿಗಳನ್ನು ಹರಾಜು ಮಾಡಿ ಹೊಸ ಯಂತ್ರೋಪಕರಣಗಳನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಚ್ ಡಿ. ದೇವೇಗೌಡ.— ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ,

ಸೌಡಿ ಪೌಟಕರಿ ಕಾರ್ಮಿಕರ ಸೇವಾ ವಿವರಗಳ ಬಗ್ಗೆ

೧೬೫೨. ಶ್ರೀ ಎಂ.ಎಸ್. ಕೃಷ್ಣನ್.(ರಾಜಾಜಿನಗರ)ವಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳಲ್ಲಿ ಎಷ್ಟು ಜನ ಸೌಡಿ ಪೌಟಕರಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಆ) ತುಕೋಳ್ ಆಯೋಗದ ವರದಿಯಲ್ಲಿ ಅವರ ಹೆಸರನ್ನು ಏಕೆ ಬಿಡಲಾಗಿತ್ತು.

ಇ) ಅವರ ಹೆಸರನ್ನು ಸೇರಿಸಬೇಕಾಗಿತ್ತೆಂದೂ ಅವರಿಗೆ ೧-೧-೭೧ ರಿಂದ ತುಕೋಳ್ ಆಯೋಗದ ವರದಿ ಪ್ರಕಾರ ರೂ.೯೦ ರಿಂದ ೨೦೦ ರವರೆಗೆ ಸಂಬಳ ಕೊಡಬೇಕೆಂದು ರಾಜ್ಯ ಮುಖ್ಯ ನ್ಯಾಯಾಲಯ ತೀರ್ಪಿತ್ತಿದೆಯೇ?

ಈ) ಈ ತೀರ್ಪಿನ ವಿರುದ್ಧ ಸರ್ಕಾರ ರಾಷ್ಟ್ರದ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದೆಯೇ ಆ ಬಗ್ಗೆ ಉಚ್ಚ ನ್ಯಾಯಾಲಯದವರ ತೀರ್ಪೇನು?

ಉ) ಈ ಸೌಡಿ ಪೌಟಕರಿ ಕಾರ್ಮಿಕರಿಗೆ ದೊರಬೇಕಾದ ಸಂಬಳವನ್ನು ಎಂದು ಕೊಡ ಲಾಗುವುದು?

ಶ್ರೀ ಹೆಚ್.ಡಿ.ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ಲೋಕೋಪಯೋಗಿ ಮತ್ತು ನೀರಾವರಿ ಯೋಜನೆಗಳಲ್ಲಿ ೯೬ ಜನ ಸೌಡಿಗಳು ಮತ್ತು ೪೪ ಜನ ಪೌಟಕರಿ ಕಾರ್ಮಿಕರು ಪರ್ಕ್‌ಚಾರ್ಜ್ ಸಿಬ್ಬಂದಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಆ) ತುಕೋಳ್ ಆಯೋಗವು ಲೋಕೋಪಯೋಗಿ ಪರ್ಕ್‌ಚಾರ್ಜ್ ಸಿಬ್ಬಂದಿಯವರ ಪರಿಷ್ಕರಣದ ಬಗ್ಗೆ ಯಾವುದೇ ರೀತಿಯ ಸಲಹೆಗಳನ್ನು ಕೊಟ್ಟಿರುವುದಿಲ್ಲ. ಈ ನೌಕರರನ್ನು ಖಾಯಂ ನೌಕರರಂತೆ ಪರಿಗಣಿಸಲು ಸಾಧ್ಯವಿಲ್ಲವಾದ್ದರಿಂದ ಆಯೋಗವು ವೇತನ ಪರಿಷ್ಕರಣದ ಬಗ್ಗೆ ಯಾವುದೇ ಸಲಹೆಯನ್ನು ಮಾಡಿರುವುದಿಲ್ಲುರೀತಿಯ

ಇ) ಇಲ್ಲ.

ರಾಜ್ಯದ ಶ್ರೇಷ್ಠ ನ್ಯಾಯಾಲಯವು ನೌಕರರ ವೈಯಕ್ತಿಕ ದಾವೆಯ ಆಧಾರದ ಮೇಲೆ ದಿನಾಂಕ. ೧-೧-೭೦ ಕ್ಕಿಂತ ಮೊದಲಿನ ಪೌಟಕರಿ ಸಿಬ್ಬಂದಿಗಳಿಗೆ ನಿಗದಿಪಡಿಸಿದ ವೇತನ ಶ್ರೇಣಿಯ ಬಗ್ಗೆ ಆದೇಶ ನೀಡಿರುತ್ತದೆ. ಮತ್ತೊಮ್ಮೆ ಆ ಆದೇಶದ ಆಧಾರದ ಮೇಲೆ ಪರ್ಕ್‌ಚಾರ್ಜ್ ಸಿಬ್ಬಂದಿಯವರಿಗೂ ಸಹಾ ವೇತನದಲ್ಲಿ ಸರಿಹೊಂದುವಂತೆ ಆದೇಶವನ್ನು ನೀಡಿರುತ್ತದೆ.

ಈ) ಹೌದು. ಈ ಬಗ್ಗೆ ರಾಷ್ಟ್ರದ ಉಚ್ಚ ನ್ಯಾಯಾಲಯದ ತೀರ್ಪನ್ನು ಕಾಯಂಲಾಗುತ್ತಿದೆ.

ಉ) ಸಧ್ಯದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ಎಸ್.ಕೃಷ್ಣನ್.— ತಾವು ಉತ್ತರದಲ್ಲಿ ೧೪೫ ಜನ ಸೌಡಿಗಳು ಮತ್ತು ಪೌಟಕರಿ ಗಳಿದ್ದಾರೆ ಎಂದು ಹೇಳಿದ್ದೀರಿ. ಇದರಲ್ಲಿ ಪರ್ಕ್‌ಚಾರ್ಜ್ ಸಿಬ್ಬಂದಿಯಲ್ಲಿ ಎಷ್ಟು ಜನರಿದ್ದಾರೆ ಮತ್ತು ಬೇರೆಯವರು ಎಷ್ಟು ಜನರಿದ್ದಾರೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಚ್.ಡಿ.ದೇವೇಗೌಡ.—ಎನ್.ಎಂ.ಆರ್.ನಲ್ಲಿ ದಿನಗೂಲಿ ಮೇಲೆ ಸವಡಿಗಳನ್ನು ನೇಮಕ ಮಾಡಿದ್ದಾರೆ. ವರ್ಕ್‌ಚಾರ್ಜ್ ನೌಕರರ ಬಗ್ಗೆ ನಾನು ಹೇಳಿದ್ದೇನೆ. ದಿನಗೂಲಿಯಲ್ಲಿ ೧೨,೬೦೦ ಜನ ಏನಿದ್ದಾರೆ ಅದರಲ್ಲಿ ಗ್ಯಾಂಗ್ ಕೂಲಿಗಳು, ಸವಡಿಗಳು, ಡ್ರೈವರ್‌ಗಳು, ಕ್ಲೀನರ್‌ಗಳು ಎಲ್ಲಾ ಬರುತ್ತಾರೆ. ಹಿಂದೆ ಇವರನ್ನೆಲ್ಲಾ ನೇಮಕ ಮಾಡಿದ್ದಾರೆ. ಈ ಸವಡಿಗಳು ವೇತನ ಶ್ರೇಣಿಯಲ್ಲಿ ಬರುವುದಿಲ್ಲ. ವರ್ಕ್‌ಚಾರ್ಜ್ ಸಿಬ್ಬಂದಿಯಲ್ಲಿರುವವರಿಗೆ ತಿಂಗಳ ವೇತನ ನಿಗದಿ ಮಾಡಿದ್ದೇವೆ. ೧೯೭೦ರ ಸರ್ಕಾರಿ ಆಜ್ಞೆಯಲ್ಲಿ ತಿಂಗಳ ಭತ್ಯೆ ಇಷ್ಟು ಎಂದು ನಿಗದಿ ಮಾಡಿದ್ದಾರೆ. ಇದೇ ಬೇರೆ. ಆದೇ ಬೇರೆ ತಾವು ಏನು ಸವಡಿಗಳ ಬಗ್ಗೆ ರೆಫರ್ ಮಾಡಿದ್ದೀರಿ ಅವರನ್ನು, ಗ್ಯಾಂಗ್ ಕೂಲಿಗಳನ್ನು ೩೦೦ ರೂಪಾಯಿಗಳ ತಿಂಗಳ ವೇತನದಲ್ಲಿ ನೇಮಕ ಮಾಡಬೇಕೆಂದು ತಜ್ಞರ ಸಮಿತಿ ವರದಿ ಕೊಟ್ಟಿದೆ. ೨೫೦ ಎಕರೆಗೆ ಒಬ್ಬ ಸವಡಿಯನ್ನು ನೇಮಕ ಮಾಡುತ್ತೇವೆ. ಈ ದೃಷ್ಟಿಯಿಂದ ಇವರು ಹೆಚ್ಚು ಜನ ಬೇಕಾಗುತ್ತಾರೆ. As and when every project ನಲ್ಲಿ irrigation potential create ಮಾಡತಕ್ಕಂತಹ ಕಾಲದಲ್ಲಿ ಅಬ್ಸಾರ್ಬ್ ಮಾಡುತ್ತಾ ಹೋಗುತ್ತೇವೆ. The G.O. will be issued very shortly.

ಶ್ರೀ ಎಂ.ಎಸ್.ಕೃಷ್ಣನ್.—ಈ ವರ್ಕ್ ಛಾರ್ಜ್ ಸಿಬ್ಬಂದಿಗಳು ಏನಿದ್ದಾರೆ ಇವರಿಗೆ ಏನು ಈಗ ೨೫೦ ಎಕರೆಗೆ ಒಬ್ಬರಂತೆ ಕೆಲಸ ಮಾಡುತ್ತಿದ್ದಾರೆ ಅವರ ಜೊತೆಗೆ ಇವರನ್ನು ಸೇರಿಸಿಕೊಂಡು ಸಪರೇಟ್ ಸ್ಕೇಲ್ ಕೊಡುತ್ತೀರಾ? ಇವರಿಗೂ ಕೂಡಾ ಬೇರೆಯವರಿಗೆ ಕೊಡುತ್ತಿರುವಂತಹ ೩೦೦ ರೂಪಾಯಿ ಅನ್ವಯವಾಗುತ್ತದೆಯೇ?

ಶ್ರೀ ಎಚ್.ಡಿ. ದೇವೇಗೌಡ.—ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿರುವವರಿಗೆ ಪರಿಷ್ಕರಣ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಅಪ್ಪಣೆ ಮಾಡತಕ್ಕ ನಿಯಮಾವಳಿ ಬೇರೆ ಇದೆ. I am not going to consider them as permanent employees. I want to make it very clear on the floor of this House. If you make them as permanent employees, then, there will be heavy finanical implications on this issue and the developmental works in the PWD will come to a stand-still ಇವರಿಗೆ ಏನು ತೊಂದರೆಗಳು ಆಗುತ್ತಿವೆ ಅವನ್ನು ನಿವಾರಣೆ ಮಾಡಲು ೩೦೦ ರೂಪಾಯಿಗಳ ಮಾಸಿಕ ವೇತನವನ್ನು ನಿಗದಿ ಮಾಡಿದ್ದೇವೆ. ಇವರಿಗೆ ಆಗುತ್ತಿದ್ದ ತೊಂದರೆಗಳು ಎಂದರೆ, ಅಲ್ಲಿ ಜೂನಿಯರ್ ಎಂಜಿನಿಯರ್ ಇವರಿಗೆ ಅಡಿಗೆ ಮಾಡುವ, ನೀರು ಸೇದುವ ಸೌದೆ ಒಡೆಯುವ ಕೆಲಸ ಮಾಡಿಸುತ್ತಿದ್ದು ಇವರು ೩೦ ದಿನ ಕೆಲಸ ಮಾಡಿದರೂ ೨೦ ದಿನ ೧೯ ದಿನ ಎಂದು ಹೇಳಿ ಲೆಕ್ಕ ತೋರಿಸಿ ಮಿಕ್ಕಿದ್ದನ್ನು ಆತ ಲಪಟಾಯಿಸುತ್ತಿದ್ದ. ಆದುದರಿಂದ ತಿಂಗಳಿಗೆ ಇಷ್ಟು ಎಂದು ಹೇಳಿ ರೂಲ್ಸ್ ಮಾಡುತ್ತೇವೆಂದು ಹೇಳುತ್ತಿದ್ದೇನೆ. ೯೯ ಜನ ಏನಿದ್ದಾರೆ ಅವರ ಬಗ್ಗೆ ಸುಪ್ರೀಮ್ ಕೋರ್ಟಿನ ಆದೇಶವನ್ನು ಕಾಯಂಠಿತ್ತಿದ್ದೇವೆ.

ಶ್ರೀ ಎಂ.ಎಸ್.ಕೃಷ್ಣನ್.—ಈ ೧೬೫ ಜನರ ಬಗ್ಗೆ ಹೈಕೋರ್ಟಿನಲ್ಲಿ ತೀರ್ಮಾನ ಆಗಿದೆ. ಆ ಬಗ್ಗೆ ಆದೇಶ ಕೂಡಾ ಕೊಡಲಾಗಿದೆ. ೧.೧.೭೦ ಕ್ಕಿಂತ ಮೊದಲಿನ ಪೌಟಕರಿ ಸಿಬ್ಬಂದಿಗೆ ನಿಗದಿಪಡಿಸಿದ ವೇತನ ಶ್ರೇಣಿಯ ಬಗ್ಗೆ ಆದೇಶ ನೀಡಿದ್ದರೂ ಈ ಜನರ ವಿರುದ್ಧ ಏಕೆ ಸುಪ್ರೀಮ್‌ಕೋರ್ಟಿಗೆ ಹೋಗಿದ್ದೀರಿ? ಈ ಬಡವರ ವಿರುದ್ಧ ಏಕೆ ತಾವುಸುಪ್ರೀಮ್ ಕೋರ್ಟಿಗೆ ಹೋದಿರಿ?

ಶ್ರೀ ಎಚ್ ಡಿ.ದೇವೇಗೌಡ.—ಇದು ೧೪೦ ಅಥವಾ ೯೦ ಜನರ ಪ್ರಶ್ನೆ ಅಲ್ಲ. If we accept the principles of the High Court decision, the financial implication comes to nearly Rs.30 lakhs. ಯಾರೋ ಒಬ್ಬರು ವೈಯಕ್ತಿಕ ದಾವೆಯನ್ನು ಹಾಕಿದ್ದು, ಆ ಬಗ್ಗೆ ನಾವು ಗಣನೆಗೆ ತೆಗೆದುಕೊಂಡರೆ ನಾವು ಸರ್ಕಾರದಿಂದ ೩೦ ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಅದನ್ನು ಕೊಡಬೇಕೇ ಬೇಡವೇ ಎಂಬ ಬಗ್ಗೆ ನಾವು ಹೋಗಿದ್ದೇವೆ. ಮಂತ್ರಿ ಹೈಕೋರ್ಟಿಗೆ ಪೂರ್ಣ ಮಾಹಿತಿಯನ್ನು ಒದಗಿಸಿರುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ.—ಇವತ್ತು ಹೈಕೋರ್ಟಿಗೆ ಪೂರ್ತಿ ಮಾಹಿತಿಯನ್ನು ಒದಗಿಸಿಲ್ಲ ಎಂದರೆ ಯಾವ ಅಧಿಕಾರಿ ಅದನ್ನು ವಹಿಸಿರುವುದಿಲ್ಲ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಿ

ಬೇಕಾಗುತ್ತದೆ. ಇವತ್ತು ಅಲ್ಲಿ ಆರ್ಡರ್ ಸೆಕ್ರೆಟರಿ ತೂಕಡಿಸಿಕೊಂಡು ಕಂಳಿತಿರುತ್ತಾರೆ. ಅಲ್ಲಿ ಲಾಯರ್ ಏನೋ ಆಫಿಡೆವಿಟ್ ಕೊಡುತ್ತಾರೆ. ಇದರಿಂದಾಗಿ ಕೇಸ್‌ನಲ್ಲಿ ತೊಂದರೆ ಆಗಿದೆ. ಇವತ್ತು ತಮಗೆ ಕಷ್ಟ ಸುಖ ಗೊತ್ತಿದೆ. ಈ ದಿನ ಮಾನ್ಯ ಕೃಷ್ಣನ್ ಅವರು ಏನು ಹೇಳುತ್ತಿದ್ದಾರೆಂದು ನನಗೆ ಗೊತ್ತಾಗಲಿಲ್ಲ. ಅವರು ಸಂಬಳದ ಬಗ್ಗೆ ಮಾತನಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಎಚ್.ಡಿ.ದೇವೇಗೌಡ.— ಹೈದರಾಬಾದ್ ಕರ್ನಾಟಕದಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸ ಇದೆ ಎಂದು ಅವರು ಕೇಳಿದ್ದಾರೆ ನಮ್ಮಲ್ಲಿ ಸೌಡಿಗಳು ಮತ್ತು ಪೌಟಕರಿ ಕಾರ್ಮಿಕರಿಗೆ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ಹಿಂದೆ ಇವರಿಗೆ ರೆವಿನ್ಯೂ ಇಲಾಖೆಯಲ್ಲಿ ಭತ್ತ ಕೊಡಲಾಗುತ್ತಿತ್ತು. ಈಗ ನಾವು ಇಟ್ಟುಕೊಂಡಿರುವ ನೀರುಗಂಟಿಗಳಿಗೆ ದಿನಕ್ಕೆ ೭-೮-೯-೧೦ ರೂಪಾಯಿ ದಿನಗೂಲಿ ಕೊಡಲಾಗುತ್ತಿದೆ. ಈಗ ಹೈದರಾಬಾದ್ ಕರ್ನಾಟಕದಲ್ಲಿ ಏನು ಇದೆ ಆ ಬಗ್ಗೆ ಹೇಳಿದ್ದಾರೆ. That is nothing to do with the present system which we are adopting. ಅವರಲ್ಲಿ ಒಬ್ಬರು ಕೋರ್ಟಿಗೆ ಹೋಗಿದ್ದಾರೆ. ಒಂದು ದಾವಾ ಹಾಕಿ ಒಂದು ಡಿಸಿಷನ್ ತೆಗೆದು ಕೊಂಡಿದ್ದೇವೆ. ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. It is alright. It is an individual case. I know the implications. I have studied that. That is why the State Government has taken a decision to go in appeal to the Supreme Court. ನಾವು ಸುಪ್ರೀಮ್ ಕೋರ್ಟಿನ ಆದೇಶವನ್ನು ಕಾಯುತ್ತಿದ್ದೇವೆ.

ಚುಕ್ಕೆ ಪ್ರಶ್ನೆ ೧೨೦೬, ೧೬೬೦, ೧೧೬೧, ೧೪೨೫. ೧೨೬೪ ಗಳಿಗೆ ಸದಸ್ಯರು ಗೈರು ಹಾಜರಾಗಿದ್ದರಿಂದ,

ರಾಜ್ಯ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸುವ ಬಗ್ಗೆ.

೫೭೫. (೧೪೩೨) ಶ್ರೀ ಬಿ. ಬೈರಪ್ಪಾಜಿ (ಶಿರುವೇಕೆರೆ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೨-೮೩, ೧೯೮೩-೮೪ ಹಾಗೂ ೧೯೮೪-೮೫ರಲ್ಲಿ ರಾಜ್ಯ ಸರ್ಕಾರದವರು ರಾಜ್ಯದ ಯಾವ ಯಾವ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾರ್ಪಡಿಸಲು ಕೇಂದ್ರ ಸರ್ಕಾರವನ್ನು ಕೇಳಿಕೊಂಡಿದ್ದಾರೆ?

ಆ) ರಾಜ್ಯ ಸರ್ಕಾರದವರ ಕೋರಿಕೆಯಂತೆ ರಾಜ್ಯದ ಯಾವ ಯಾವ ರಸ್ತೆಗಳನ್ನು ಕೇಂದ್ರ ಸರ್ಕಾರದವರು ವಹಿಸಿಕೊಂಡಿರುತ್ತಾರೆ. ಹಾಗೂ ವಹಿಸಿಕೊಂಡಿರುವ ರಸ್ತೆಯ ಸುವಾರು ಉದ್ದವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೨-೮೩ರಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಈ ಕೆಳಗೆ ಕಾಣಿಸಿದ ರಾಜ್ಯದ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಲು ಸರ್ಕಾರವು ಪತ್ರ ಸಂಖ್ಯೆ ಪಿಡಬ್ಲ್ಯೂಡಿ ೨೦೫ ಎನ್‌ಹೆಚ್ ೮೨, ದಿನಾಂಕ ೨೭/೩೦-೮-೮೨ರಲ್ಲಿ ಕೇಳಿಕೊಂಡಿದೆ.

(೧)	ರಾಷ್ಟ್ರೀಯ ಹೆದ್ದಾರಿ ೭ರಲ್ಲಿರುವ ಗೂಟಿ (ಆಂಧ್ರಪ್ರದೇಶ)ದಿಂದ ಗುಂತಕಲ್ಲು-ಬಳ್ಳಾರಿ-ಹೊಸಪೇಟೆ-ಕೊಪ್ಪಳ-ಗದಗ-ಹುಬ್ಬಳ್ಳಿ-ಯಲ್ಲಾಪುರ-ಬಲಗುಲಿ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ೧೭ರಲ್ಲಿರುವ ಕಾರವಾರ ಸೇರುವ ರಸ್ತೆ. ...	ಉದ್ದ ೪೨೨.೦೦ಕಿ.ಮಿ.
(೨)	ಬೆಂಗಳೂರು-ಮೈಸೂರು-ನಂಜನಗೂಡು-ಗುಂಡ್ಲುಪೇಟೆ-ಊಟಿ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ೪೭ ರಲ್ಲಿರುವ ಕೊಯಮತ್ತೂರು (ತಮಿಳುನಾಡು) ಸೇರುವ ರಸ್ತೆ.	೨೨೦.೦೦ಕಿ.ಮಿ.
(೩)	ಮೈಸೂರು-ಶ್ರೀರಂಗಪಟ್ಟಣ-ನಾಗಮಂಗಲ-ಚಿಕ್ಕನಾಯಕನಹಳ್ಳಿ-ಹುಳಿಯಾರು-ಹಿರಿಯೂರು-ಬಳ್ಳಾರಿ-ಎರಗುಂಟ್ಲ-ಶಹಬಾದ್-ಗುಲ್ಬರ್ಗ ಮಾರ್ಗವಾಗಿ ಹಮ್ನಾಬಾದನ್ನು ಸೇರುವ	